

# ಗರ್ಭಧಾರಣೆಗೆ ಮೂರ್ಛೆ ರೋಗ ಮಾರಕವೇ?

ಮೂರ್ಛೆ ರೋಗ ಇರುವ ಮಹಿಳೆಯರು ಗರ್ಭಧಾರಣೆಗೆ ಮುನ್ನ ಮತ್ತು ನಂತರ ಸಾಕಷ್ಟು ಆರೋಗ್ಯ ಕಾಳಜಿ ವಹಿಸಬೇಕಾಗುತ್ತದೆ. ತಜ್ಞ ವೈದ್ಯರ ಸಲಹೆ ಮೇರೆ ಸೂಕ್ತ ಸಮಯದಲ್ಲಿ ಸರಿಯಾದ ತಪಾಸಣೆ, ಔಷಧೋಪಚಾರ ಮುಂತಾದವುಗಳನ್ನು ಮಾಡಿಕೊಳ್ಳಬೇಕು.

■ ಡಾ. ವೀಣಾ ಭಟ್, ಭದ್ರಾವತಿ

ದಾವಣಗೆರೆ ಮೂಲದ ಸರಳಾಗೆ ಮೂವತ್ತರ ಹರೆಯ. ಮದುವೆಯಾಗಿ ಗರ್ಭ ಧರಿಸಿದ ಅವಳಿಗೆ ವೈದ್ಯರ ಬಳಿ ತಪಾಸಣೆಗೆ ಹೋದಾಗ ಏನೋ ಅಳುಕು. ಏಕೆಂದರೆ ಅವಳಿಗೆ ಚಿಕ್ಕ ವಯಸ್ಸಿನಿಂದಲೇ ಮೂರ್ಛೆ ರೋಗವಿತ್ತು. ಇದಕ್ಕಾಗಿ ಆಕೆ ಮಾತ್ರೆಯನ್ನೂ ನಿಯಮಿತವಾಗಿ ಸೇವಿಸುತ್ತಿದ್ದಳು. ಇದನ್ನು ಆಕೆಯ ಗಂಡನ ಮನೆಯವರಿಗೂ ತಿಳಿಸಿರಲಿಲ್ಲ. ಚಿಕ್ಕವಳಿದ್ದಾಗಿನಿಂದಲೂ ಮಾತ್ರೆ ಸೇವಿಸುತ್ತಿದ್ದ ಆಕೆಗೆ ತನ್ನ ಮಗುವಿಗೆ ಎಲ್ಲಿ ಮೂರ್ಛೆ ರೋಗ ಬಂದು ಬಿಡುವುದೋ ಎಂಬ ಆತಂಕ. ಹೆರಿಗೆಗಾಗಿ ಭದ್ರಾವತಿಯ ತಾಯಿ ಮನೆಗೆ ಬಂದವಳು ತಪಾಸಣೆಗಾಗಿ ಬಂದಾಗ ತನ್ನ ಅಳಲನ್ನು ತೋಡಿಕೊಂಡಳು. ನಂತರ ಗಂಡನಿಗೂ, ಆಕೆಗೂ ಮೂರ್ಛೆ ರೋಗದ ಸಾಧಕ–ಬಾಧಕ, ಪರಿಣಾಮ ತಿಳಿಸಿ ಚಿಕಿತ್ಸೆ ನೀಡಿದಾಗ ಸಮಾಧಾನಗೊಂಡಳು ಸರಳಾ.

## ಏನಿದು ಮೂರ್ಛೆ ರೋಗ?

ಮೂರ್ಛೆ ಇದೊಂದು ಮೆದುಳಿನ ನರಕೋಶಗಳಲ್ಲಿ ಹೆಚ್ಚಿನ ಪ್ರಮಾಣದ ವಿದ್ಯುತ್ ಚಟುವಟಿಕೆ ಉಂಟಾದಾಗ ಬೇರೆ ಬೇರೆ ತರಹದಲ್ಲಿ ಕಾಣಿಸಿಕೊಳ್ಳುವ ಕಾಯಿಲೆ. ಕೆಲವರಿಗೆ ಕೈಕಾಲು ಅದುರಿ ಬಾಯಿಯಲ್ಲಿ ನೊರೆ ಬಂದು ಪ್ರಜ್ಞೆ ತಪ್ಪಿ ಹೋಗಿ ಮತ್ತೆ ಸ್ವಲ್ಪ ಹೊತ್ತಿಗೆ ಮರಳಿ ಪ್ರಜ್ಞೆ ಬರಬಹುದು. ಇದರಲ್ಲಿ ಬೇರೆ ಬೇರೆ ವಿಧಗಳಿದ್ದರೂ ಸೂಕ್ತ ತಜ್ಞರಿಂದ ಸಲಹೆ ಪಡೆದು ಸರಿಯಾಗಿ ಮಾತ್ರೆ ತೆಗೆದುಕೊಳ್ಳುತ್ತಿದ್ದರೆ ಸಾಮಾನ್ಯರಂತೆ ಜೀವಿಸಬಹುದು. ಮೂರ್ಛೆ ರೋಗದಲ್ಲಿ ಬಳಸುವ ಮಾತ್ರೆಗಳು ಋತುಚಕ್ರದ ಏರುಪೇರು ಉಂಟು ಮಾಡಿ ಕೆಲವು ಮಹಿಳೆಯರಲ್ಲಿ ಗರ್ಭಧಾರಣೆಯಾಗಲಿಕ್ಕೆ ತೊಡಕಾಗಬಹುದು ಎನ್ನಿಸಿದರೂ ಹೆಚ್ಚಿನ ಮಹಿಳೆಯರು ಸರಿಯಾದ ಚಿಕಿತ್ಸೆಯಿಂದ ಆರೋಗ್ಯವಂತ ಮಗು ಪಡೆಯಬಹುದು.

ಮೂರ್ಛೆ ರೋಗ ಇರುವವರು, ಅದಕ್ಕಾಗಿ ಮಾತ್ರೆ ಸೇವಿಸುತ್ತಿರುವವರು ಗರ್ಭ ಧರಿಸುವುದು ಅಸಾಮಾನ್ಯ ಅಥವಾ ಅಪರೂಪವೇನಲ್ಲ. ಏಕೆಂದರೆ ಒಂದು ಅಧ್ಯಯನದ ಪ್ರಕಾರ ಸುಮಾರು 200–250 ರಲ್ಲಿ ಒಬ್ಬರಿಗೆ ಈ ಕಾಯಿಲೆಯಿದ್ದು ಮಾತ್ರೆಗಳನ್ನು ಸೇವಿಸುತ್ತಿರುತ್ತಾರೆ. ಆತಂಕದ ವಿಷಯವೆಂದರೆ ಮೂರ್ಛೆ ರೋಗ ಇರುವವರು ಗರ್ಭ ಧರಿಸಿದಾಗ ಅದು ಜನಸಾಮಾನ್ಯರಿಗಿಂತ ಹೆಚ್ಚು ಪ್ರಾಣಾಂತಿಕವಾಗಿ ಪರಿಣಮಿಸಬಹುದು. (ಜನಸಾಮಾನ್ಯರಲ್ಲಿ 2–3 ಪಟ್ಟು ಗರ್ಭಧಾರಣೆಯಿಂದ ಪ್ರಾಣಾಪಾಯ ಹೆಚ್ಚಾಗುತ್ತದೆ). ಇದಕ್ಕಿಂತಲೂ ಸಮಾಧಾನಕರ ಅಂಶವೆಂದರೆ ಹೆಚ್ಚಿನ ಗರ್ಭಿಣಿಯರು ಈ ಕಾಯಿಲೆಗೆ ಸರಿಯಾಗಿ ಔಷಧ ಸೇವಿಸಿ ನಿಯಂತ್ರಣದಲ್ಲಿದ್ದರೆ ಗರ್ಭಧಾರಣೆ, ಹೆರಿಗೆ, ಎಲ್ಲವೂ ಸುಸೂತ್ರ. ಮಕ್ಕಳು ಸಹಜವಾಗೇ ಇರುತ್ತಾರೆ. ಗರ್ಭಧಾರಣೆಗೂ ಮೊದಲೇ ಮೂರ್ಛೆ ರೋಗ ಇಲ್ಲದಿದ್ದರೆ ಶೇ. 1/3 ರಷ್ಟು ಜನರಲ್ಲಿ ಗರ್ಭ ಧರಿಸಿದಾಗ ತೊಂದರೆಯಾಗಬಹುದು. ಇಂಥವರು ಸರಿಯಾಗಿ ಮಾತ್ರೆಯನ್ನು ಸೇವಿಸಿರುವುದಿಲ್ಲ. ವೈದ್ಯರ ಸಲಹೆಗಳನ್ನು ಪಾಲಿಸಿರುವುದಿಲ್ಲ. ಇನ್ನೂ ಕೆಲವರಲ್ಲಿ ಮಾತ್ರೆಯ ಹೀರುವಿಕೆಯೂ ವ್ಯತ್ಯಾಸವಾಗಬಹುದು. ಏಕೆಂದರೆ ಗರ್ಭಧಾರಣೆಯಲ್ಲಿ ರಕ್ತದ ಪ್ಲಾಸ್ಮಾ ದ್ರವದ ಮೊತ್ತ ಹೆಚ್ಚಾಗಿದ್ದು ಜೊತೆಗೆ ಪ್ರೊಟೀನ್‌ನೊಡನೆ ಬಂಧಿಸಲ್ಪಡುವ ಗುಣ, ಮಾತ್ರೆಯು ಮೂತ್ರಪಿಂಡದಿಂದ ತಿಳಿಗೊಳಿಸುವಿಕೆಯೂ ಹೆಚ್ಚಾಗುತ್ತದೆ.

ಹೆಚ್ಚು ಮೂರ್ಛೆ ಬರುವ ಸಂದರ್ಭ ಹೆರಿಗೆಯ ಸಮಯದಲ್ಲಿ (ಶೇ. 12) ಇನ್ನು ಕೆಲವರಲ್ಲಿ 24 ಗಂಟೆಯ ನಂತರ. (30 ನಿಮಿಷಕ್ಕೂ ಹೆಚ್ಚು ಕಾಲ ಫಿಟ್ಸ್ ಬರುವ ಸಂಭವ ಕೇವಲ ಶೇ 1)

## ಮೂರ್ಛೆ ರೋಗ ಇದ್ದವರಲ್ಲಿ ಗರ್ಭಧಾರಣೆಯ ಸಂದರ್ಭಗಳಲ್ಲಿ ಏನೆಲ್ಲಾ ತೊಂದರೆಗಳಾಗಬಹುದು?

- ತಾನೇ ತಾನಾಗಿ ಗರ್ಭಪಾತವಾಗಬಹುದು.
- ಮಗುವಿನ ಜನ್ಮಜಾತ ವೈಕಲ್ಯಗಳಾಗಬಹುದು.
- ಹೆರಿಗೆಯ ಮೊದಲೇ ಹಠಾತ್ತನೆ ಕಸ ಬಿಟ್ಟುಕೊಳ್ಳಬಹುದು.
- ಇತ್ತೀಚಿನ ವರದಿಯ ಪ್ರಕಾರ ಪ್ರೀಎಕ್ಲಾಂಪ್ಸಿಯ ಮೂರ್ಛೆ ರೋಗಕ್ಕೆ ಮಾತ್ರೆ ತೆಗೆದುಕೊಳ್ಳುತ್ತಿರುವವರಲ್ಲಿ ಹೆಚ್ಚು.